ಕಾಗವಾಡ ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ಭರ್ತಿ ಮಾಡುವುದು.

283(2947)

ಶ್ರೀ ಭರಮಗೌಡ ಅ.ಕಾಗೆ(ಕಾಗವಾಡ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಾಗವಾಡ ಕ್ಷೇತ್ರದಲ್ಲಿ ಸುಮಾರು 18 ರಿಂದ 20 ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇವುಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ದಿನಾಂಕ 20.07.2001ರ ಅಂತ್ಯಕ್ಕೆ ಮೂರು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇದ್ದು ಅವುಗಳನ್ನು ಭರ್ತಿ ಮಾಡಲಾಗಿದೆ. ಈಗ ಬೆಳಗಾಂ ಜಿಲ್ಲೆಯ ಕಾಗವಾಡ ಮತ ಕ್ಷೇತ್ರದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗಳು ಖಾಲಿ ಇರುವುದಿಲ್ಲ.

ಶ್ರೀ ಭರಮಗೌಡ ಅ.ಕಾಗೆ: ತಾಲ್ಲೂಕಿನಲ್ಲಿ 51 ಪಂಚಾಯಿತಿ ಇರುವುದರಿಂದ, ಒಬ್ಬ ಪಂಚಾಯಿತಿ ಕಾರ್ಯದರ್ಶಿಗೆ 2-3 ಪಂಚಾಯಿತಿಗಳನ್ನು ಒದಗಿಸಿದ್ದಾರೆ. ಅದಕ್ಕಾಗಿ ಅಲ್ಲಿ ಒಂದು ಪಂಚಾಯಿತಿಗೆ ಹೋಗಿ ಕೇಳಿದರೆ, ಅವರು ಆ ಊರಿನಲ್ಲಿದ್ದಾರೆನ್ನುತ್ತಾರೆ. ಮತ್ತೊಂದು ಊರಿನಲ್ಲಿ ಕೇಳಿದರೆ, ಅವರು ಇಲ್ಲಿ ಕೆಲಸ ಮಾಡುತ್ತಿದ್ದಾರೆನ್ನುತ್ತಾರೆ. ಅವರು ಎಲ್ಲಿಯೂ ಕೆಲಸ ಮಾಡುತ್ತಿಲ್ಲ. ಉದಾಹರಣೆಗೆ ಮಹೇಶ್ವರಗಿ ಎಂಬ ಗ್ರಾಮದಲ್ಲೊಬ್ಬ ಪಂಚಾಯಿತಿ ಕಾರ್ಯದರ್ಶಿ ಜಮಖಂಡಿ ತಾಲ್ಲೂಕಿನ ಬನಹಟ್ಟಿ ಗ್ರಾಮದಲ್ಲಿರುವುದರಿಂದ, ಅವರು ಈ ಗ್ರಾಮ ಪಂಚಾಯಿತಿಗೆ ಬರುತ್ತಿಲ್ಲ. ಆದುದರಿಂದ, ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿ ಸಿಇಓಗಳ ಗಮನಕ್ಕೆ ತಂದರೂ ಸಹ ಯಾವ ಉಪಯೋಗವೂ ಆಗಲಿಲ್ಲ. ಈ ಪಂಚಾಯಿತಿ ಕಾರ್ಯದರ್ಶಿಗಳಿಗೆ 2-3 ಪಂಚಾಯಿತಿಗಳನ್ನು ಕೊಟ್ಟಿರುವುದರಿಂದ, ಪಂಚಾಯಿತಿ ಕಾರ್ಯ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತಿದ್ದು, ಇದನ್ನು ನಿವಾರಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಅವರ ಅಸೆಂಬ್ಲಿ ಕ್ಷೇತ್ರದಲ್ಲಿ 3 ಪಂಚಾಯಿತಿ ಸೆಕ್ರೆಟರಿ ಹುದ್ದೆಗಳು ಖಾಲಿ ಇತ್ತು. ಈಗಾಗಲೇ ಜುಲೈ 27ನೇ ತಾರೀಖಿಗೆ

ಆ 3 ಹುದ್ದೆಗಳನ್ನೂ ನಾವು ಫಿಲ್-ಅಪ್ ಮಾಡಿದ್ದೇವೆ. ಅಷ್ಟೇ ಅಲ್ಲ, ಆ ಜಿಲ್ಲೆಯಲ್ಲಿರುವ 31 ಸೆಕ್ರೆಟರಿ ಹುದ್ದೆಗಳನ್ನೂ ಕೂಡ ಡೆಪ್ಯುಟೇಷನ್ ಬೇಸಿನ್ ಮೇಲೆ ಈಗಾಗಲೇ ಫಿಲ್-ಅಪ್ ಮಾಡಿದ್ದೇವೆ. ಜಿಲ್ಲೆಯಲ್ಲಿ ಸೆಕ್ರೆಟರಿ ಇಲ್ಲದ ಒಂದೂ ಪಂಚಾಯಿತಿ ಸದ್ಯಕ್ಕಿಲ್ಲ. ನನಗೆ ಈ ಮಾಹಿತಿಯನ್ನು ಜಿಲ್ಲಾ ಸಿಇಓರವರು ಫ್ಯಾಕ್ಸ್ ಮೂಲಕ ಕಳುಹಿಸಿ ಕೊಟ್ಟಿದ್ದಾರೆ.

ಅಧ್ಯಕ್ಷರು: ಮಾನ್ಯ ಭರಮಗೌಡರವರು ಅವರ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹಾಗೆ ಕೇಳಿದ್ದಾರೆ.

ಶ್ರೀ ಉಮೇಶ್ ಪಿ.ಕತ್ತಿ: ಅಲ್ಲಿ 10 ಪರ್ಸೆಂಟ್‌ಗಿಂತ ಹೆಚ್ಚು ವೇಕೆನ್ಸಿ ಇದೆ. ತಾವು ಖುದ್ದಾಗಿ ಬಂದರೆ ನಾನು ತೋರಿಸುತ್ತೇನೆ. ಬೆಳಗಾಂ ಜಿಲ್ಲೆಯಲ್ಲಿ ಇನ್‌ಚಾರ್ಜ್ ಸೆಕ್ರೆಟರಿಗಳು ಬಹಳ ಇದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಇನ್‌ಚಾರ್ಜ್ ಸೆಕ್ರೆಟರಿ ಇದ್ದಾರೆ. ಇವರು [xxx] ಮಾಹಿತಿ ಕೊಟ್ಟರೆ ನಾವೇನು ಮಾಡಬೇಕು? ನೀವು ಬನ್ನಿ, ಅಲ್ಲಿ ವೇಕೆನ್ಸಿ ಇದೆ ಎಂಬುದನ್ನು ನಾನು ತೋರಿಸುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: [xxx] ಎನ್ನುವ ಪದ ಅನ್‌ಪಾರ್ಲಿಮೆಂಟರಿ ಪದ.

ಅಧ್ಯಕ್ಷರು: ಆ ಪದವನ್ನು ಕಡತದಿಂದ ತೆಗೆಯಿರಿ. ಸತ್ಯಕ್ಕೆ ದೂರವಾದುದು ಎಂದು ಹೇಳಬೇಕಾಗಿತ್ತು.

ಶ್ರೀ ಎಂ.ವೈ.ಘೋರ್ಪಡೆ: ನನಗೆ ಆ ರೀತಿ ಹೇಳುವ ಅವಶ್ಯಕತೆ ಇಲ್ಲ. 23ನೇ ತಾರೀಖು ಸಿಇಓರವರು ಜಿಲ್ಲೆಯಲ್ಲಿ 31 ವೇಕೆನ್ಸಿ ಇದ್ದು, ಆನ್ ಡೆಪ್ಯುಟೇಷನ್ ಮೇಲೆ ಫಿಲ್‌ಅಪ್ ಮಾಡಿದ್ದೇವೆಂದು ಫ್ಯಾಕ್ಸ್ ಮೂಲಕ ವರದಿ ಕಳುಹಿಸಿದ್ದಾರೆ.

ಶ್ರೀ ಉಮೇಶ್ ಪಿ.ಕತ್ತಿ: ನೀವು ಬರುವುದಾದರೆ ನಾನೂ ಜೊತೆಯಲ್ಲಿ ಬರುತ್ತೇನೆ. ಇದರಲ್ಲಿ ವೇಕೆನ್ಸಿ ಇದ್ದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳಿ. ವೇಕೆನ್ಸಿ ಇಲ್ಲವೆಂದರೆ, I will resign from MLA seat.

ಶ್ರೀ ಎಂ.ವೈ.ಘೋರ್ಪಡೆ: ತಮ್ಮ ಪದವನ್ನೇ ಉಪಯೋಗಿಸಬೇಕಾಗುತ್ತದೆ. ಈ ವರದಿಯೇನಾದರೂ ಸತ್ಯಕ್ಕೆ ದೂರವಾಗಿದ್ದರೆ, ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

[xxx] ಈ ಪದವನ್ನು ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಯಿತು.